

# ಸ್ಥಳ ಉಳಿಸುವ ಆಕರ್ಷಕ ವಾರ್ಡ್‌ರೋಬ್

■ ರಾಮ್‌ಕದಮ್

ಹೊಸ ಹೊಸ ಬಟ್ಟೆಗಳನ್ನು ಖರೀದಿಸಿದಂತೆ ಅವುಗಳನ್ನು ಸಂರಕ್ಷಿಸಿ ಇಡುವುದೂ ಒಂದು ಸವಾಲಾಗಿರುತ್ತದೆ. ಬೆಡ್‌ರೂಮ್‌ಗಳಲ್ಲಿ ಬಟ್ಟೆ ಇಡಲು, ಸ್ಥಳಕ್ಕೆ ಅನುಗುಣವಾಗಿ ವಾರ್ಡ್‌ರೋಬ್ ನಿರ್ಮಿಸಿಕೊಳ್ಳುತ್ತೇವೆ. ಒಳ ಉಡುಪು, ಕರವಸ್ತ್ರ, ನ್ಯಾಪ್‌ಕಿನ್ ಮತ್ತಿತರ ಚಿಕ್ಕಪುಟ್ಟ ಬಟ್ಟೆಗಳನ್ನಿಡಲು ಅದರಲ್ಲಿಯೇ ಕೆಲವು ಡ್ರಾವರ್ ವ್ಯವಸ್ಥೆಯೂ ಮಾಡಿರುತ್ತೇವೆ. ಇದು ಸುಮಾರು 24 ಇಂಚು ಆಳವನ್ನು ಹೊಂದಿರುತ್ತದೆ. ಇದೊಂದು ಪ್ರಮಾಣಿತ ಅಳತೆ ಎನ್ನುವಂತೆ ಕಂಡುಬರುತ್ತದೆ. ನಿಜ ಹೇಳಬೇಕೆಂದರೆ, ಎಲ್ಲ ಬಟ್ಟೆಗಳಿಗೂ ಈ ಅಳತೆ ಹೊಂದುವುದಿಲ್ಲ. ಕೇವಲ ಹ್ಯಾಂಗರ್‌ನಲ್ಲಿ ಸಿಕ್ಕಿಸುವ ಶರಟು, ಕೋಟು ಮತ್ತು ಮಹಿಳೆಯರ ಇತರ ಬಟ್ಟೆಗಳಿಗಷ್ಟೇ ಈ ಅಳತೆ ಸೂಕ್ತವಾಗಿರುತ್ತದೆ. ಉಳಿದಂತೆ, ಮಡಚಿಯಿಡುವಂತಹ ಯಾವುದೇ ಬಟ್ಟೆಗಳಿಗಾಗಲೀ, ಸೀರೆಗಳನ್ನು ಹ್ಯಾಂಗರ್‌ನಲ್ಲಿ ಹಾಕಿಡುವುದಕ್ಕಾಗಲೀ 12 ರಿಂದ 15 ಇಂಚುಗಳ ಸ್ಥಳ ಬೇಕಾಗಿರುತ್ತದೆ.

ಎರಡು ಸಾಲುಗಳಲ್ಲಿ ಬಟ್ಟೆಗಳಿಡಲು ಅನುಕೂಲ ಆಗುವುದಿಲ್ಲ. ಇಟ್ಟರೆ ಹಿಂದಿನ ಬಟ್ಟೆಗಳು ಸ್ಪಷ್ಟವಾಗಿ ಕಾಣುವುದಿಲ್ಲ. ಇಟ್ಟು ನಾಲ್ಕಾರು ದಿನಗಳಾಗಿದ್ದರೆ ಎಲ್ಲಿ ಇಟ್ಟಿದ್ದೇವೆಂಬ ನೆನಪೂ ಇರುವುದಿಲ್ಲ. ಅಲ್ಲದೆ ತೆಗೆದುಕೊಳ್ಳಲು ತೊಡಕಾಗುವುದೇ ಹೆಚ್ಚು. ಮುಂದಿನ ಸಾಲು ಖಾಲಿ ಮಾಡಿಕೊಂಡೇ ಹಿಂದಿನ ಸಾಲಿನಲ್ಲಿರುವುದನ್ನು ತೆಗೆದುಕೊಳ್ಳಬೇಕಾಗಿರುತ್ತದೆ. ಸಮಯಾಭಾವವಿದ್ದಾಗ ಅಥವಾ ಧಾವಂತದಲ್ಲಿರುವಾಗ ಇದು ಕಿರಿಕಿರಿಯೆನಿಸುತ್ತದೆ. ಹಾಗೊಂದು ವೇಳೆ ಹಿಂದಿನ ಸಾಲಿನಲ್ಲಿರುವುದನ್ನೇ ನೇರವಾಗಿ ತೆಗೆದುಕೊಳ್ಳಲು ಹೋದರೆ, ಶಿಸ್ತಿನಿಂದ ಜೋಡಿಸಿ ಇಟ್ಟಿರುವುದೆಲ್ಲವೂ ಅಸ್ತವ್ಯಸ್ತವಾಗಿಬಿಡುತ್ತದೆ. ಹೀಗೆ 24 ಇಂಚು ಆಳದ ಬಟ್ಟೆ ಇಡುವ ಕಪಾಟುಗಳಿಂದ ಅನನುಕೂಲ ಹೆಚ್ಚು.

ಸಾಮಾನ್ಯವಾಗಿ ಗೃಹಿಣಿಯರು, ಇಂದು ಚಾಲ್ತಿಯಲ್ಲಿರುವ ವಾರ್ಡ್‌ರೋಬ್ ಬಗ್ಗೆ ಅಸಮಾಧಾನ ವ್ಯಕ್ತಪಡಿಸುತ್ತಾರೆ. ಹಾಗಾದರೆ, ಅಗತ್ಯಕ್ಕೆ ತಕ್ಕಂತೆ, ಸ್ಥಳ ಉಳಿಸುವ ಮತ್ತು ಆಪ್ಯಾಯವಾಗಿಸುವಂತಹ ವಾರ್ಡ್‌ರೋಬ್‌ವೊಂದರ ವಿನ್ಯಾಸ ಹೇಗಿದ್ದರೆ ಸೂಕ್ತ ಎಂಬುದರ ಬಗ್ಗೆ ನೋಡೋಣ, ಚಿತ್ರವನ್ನು ಗಮನಿಸಿ. ಇದರಲ್ಲಿ ವಾರ್ಡ್‌ರೋಬ್‌ನ ಎರಡು ಭಾಗಗಳು ಹಿಂದಕ್ಕೆ ಹೋಗಿವೆ. ಮಧ್ಯದ ಒಂದು ಭಾಗವು ಮುಂದಕ್ಕೆ ಚಾಚಿದೆ. ಮಧ್ಯದಲ್ಲಿರುವ ಖಾನೆಯು 24 ಇಂಚುಗಳದ್ದಾಗಿದೆ. ಇದರಲ್ಲಿ ಇಸ್ತ್ರಿ ಮಾಡಿ, ಹ್ಯಾಂಗರ್‌ಗೆ ಹಾಕಿಡುವಂತಹ ಬಟ್ಟೆಗಳನ್ನು ಇಡಬಹುದು. ಹ್ಯಾಂಗರ್ ಸಿಕ್ಕಿಸುವ ಭಾಗವು ಸಾಮಾನ್ಯವಾಗಿ ವಾರ್ಡ್‌ರೋಬ್‌ನ ಮೇಲಿನ ಭಾಗದಲ್ಲಿ ಬರುವಂತೆ ಮಾಡಲಾಗಿರುತ್ತದೆ. ಇದರಿಂದ ಎತ್ತರ ಕಡಿಮೆ ಇರುವವರು ಮತ್ತು ಮಕ್ಕಳಿಗೆ ಬಳಸಲು ಕಷ್ಟವಾಗುತ್ತದೆ. ಹೀಗಾಗಿ ಅದು ಎಲ್ಲರಿಗೂ ಎಟುಕುವಂತೆ ಇರಬೇಕು. ಅದರ ಮೇಲಿನ ಖಾನೆಯಲ್ಲಿ ಹೆಚ್ಚು ಬಳಕೆಯಾಗದ ಬಟ್ಟೆಗಳನ್ನು ಇಡಲು ಮತ್ತು ಕೆಳಗಿನ ಭಾಗದಲ್ಲಿ ಡ್ರಾವರ್‌ಗಳನ್ನು ನಿರ್ಮಿಸಿಕೊಳ್ಳುವ ಮೂಲಕ ಈ ಭಾಗವು ಅನುಕೂಲಕಾರಿಯಾಗಿಸಬಹುದು. ಇನ್ನು ಅಕ್ಕಪಕ್ಕವಿರುವ ಖಾನೆಗಳಲ್ಲಿ ಮೊದಲ ಭಾಗವು 15 ಇಂಚುಗಳದ್ದಾಗಿದೆ. ಇದರಲ್ಲಿ ಹ್ಯಾಂಗರ್‌ನಲ್ಲಿ ಹಾಕಿಡಬಹುದಾದ ಸೀರೆಗಳು ಮತ್ತು ಅಂತಹ ಯಾವುದೇ ಬಟ್ಟೆಗಳನ್ನು ಇಡಬಹುದು. ಮಡಿಚಿ ಇಡುವ ಬಟ್ಟೆಗಳಿಗೆ ಸೂಕ್ತವಾದ ಕಡಿಮೆ ಬಳಕೆಯ ಸ್ಥಳವಾಗುತ್ತದೆ. ಹಾಗೆಯೇ ಕೊನೆಯ ಭಾಗವು 12 ಇಂಚಿನದ್ದಾಗಿದೆ. ಇದರಲ್ಲಿ ಮಕ್ಕಳ ಉಡುಪುಗಳು, ಟವೆಲ್ಲು, ಪಂಚೆ, ನೈಟಿ ಇಂತಹ ಮುಂತಾದ ಬಟ್ಟೆಗಳನ್ನು ಮಡಿಚಿಡಲು ಸಾಕಾಗುತ್ತದೆ.

ಈ ವಿನ್ಯಾಸದ ವಾರ್ಡ್‌ರೋಬ್‌ನ ಬಳಕೆಯಿಂದಾಗಿ ಅದರಲ್ಲಿರುವ ಎಲ್ಲ ಬಟ್ಟೆಗಳೂ ಸ್ಪಷ್ಟವಾಗಿ ಕಾಣುತ್ತವೆ. ತೆಗೆದುಕೊಳ್ಳುವಾಗ ಮತ್ತು ಇಡುವಾಗ ತೊಂದರೆಯಾಗುವುದಿಲ್ಲ. ಅಸ್ತವ್ಯಸ್ತಗೊಳ್ಳುವುದಿಲ್ಲ. ಸಾಕಷ್ಟು ಸ್ಥಳವೂ ಉಳಿಸಲು ಸಾಧ್ಯವಾಗುತ್ತದೆ. ಹೀಗೆ ಸಾಕಷ್ಟು ಸ್ಥಳವನ್ನು ಉಳಿಸುವುದರ ಜೊತೆಗೆ ಬಳಕೆಗೆ ಯೋಗ್ಯವಾಗುವಂತಹ ವಸ್ತ್ರಾಗಾರವನ್ನು ರೂಪಿಸಿಕೊಳ್ಳಬಹುದು. ಈಗ ಇದೇ ವಾರ್ಡ್‌ರೋಬ್ ಅನ್ನು ಮತ್ತಷ್ಟು ಅನುಕೂಲಕರವಾಗಿಯೂ, ಆಧುನಿಕವಾಗಿಯೂ ರೂಪಿಸುವ ನಿಟ್ಟಿನಲ್ಲಿ ಯೋಚಿಸೋಣ.

ಈ ಚಿತ್ರದಲ್ಲಿರುವ ವಾರ್ಡ್‌ರೋಬ್‌ನ ಒಳಗಿನ ವ್ಯವಸ್ಥೆಯನ್ನು ಗಮನಿಸಿ. ಬೆಳಕು ಕಡಿಮೆ ಇರುವ ಜಾಗದಲ್ಲಿ ಅಥವಾ ಕತ್ತಲು ಕವಿದಿರುವ ಜಾಗದಲ್ಲಿಯೂ ನಿರಾತಂಕವಾಗಿ ಬಟ್ಟೆಗಳನ್ನು ತೆಗೆದುಕೊಳ್ಳಲು ಅನುಕೂಲವಾಗುವ ಹಾಗೆಯೇ ಫ್ರಿಜ್‌ನಲ್ಲಿರುವಂತೆ, ಬಾಗಿಲು ತೆಗೆದೊಡನೆ ದೀಪ ಬೆಳಗುವಂತೆಯೂ, ಬಾಗಿಲು ಮುಚ್ಚಿದ ಮೇಲೆ ದೀಪ ಆರುವಂತೆಯೂ ವ್ಯವಸ್ಥೆ ಮಾಡಿಕೊಳ್ಳಲು ಸಾಧ್ಯವಿದೆ. ಇಲ್ಲಿ ತೋರಿಸಿರುವ ದೀಪದ ವ್ಯವಸ್ಥೆ ಒಂದು ಪಾರಂಪರಿಕ ಪರಿಕರಗಳಿಂದ ಕೂಡಿದೆ. ಇದನ್ನು ಅತ್ಯಾಕರ್ಷಕವಾಗಿಯೂ, ಅತ್ಯಾಧುನಿಕವಾಗಿಯೂ ರೂಪಿಸಬಹುದು.

ಚಿತ್ರದಲ್ಲಿರುವ ವಾರ್ಡ್‌ರೋಬ್‌ನ ಒಳಹೊರಗೆ ಅಳವಡಿಸಲಾದ ದೀಪಗಳ ವಿನ್ಯಾಸವನ್ನು ಸೂಕ್ಷ್ಮವಾಗಿ ಗಮನಿಸಿ. ವಾರ್ಡ್‌ರೋಬ್ ಹೊರಗಿನ ಭಾಗದಲ್ಲಿ ನೆಲಕ್ಕೆ ತಾಗಿರುವ ಜಾಗದಲ್ಲಿ, ಓಡಾಡುವ ನೆಲವನ್ನು ಬೆಳಗುವಂತೆಯೂ, ವಾರ್ಡ್‌ರೋಬ್ ಪ್ರದರ್ಶಿಸುವಂತೆಯೂ ಮಾಡಲು ಎಲ್‌ಇಡಿ ರೈಸ್‌ಸ್ಟ್ರಿಪ್ ದೀಪದ ಮಾಲೆಯನ್ನು ಬಳಸಲಾಗಿದೆ. ಹಾಗೆಯೇ ವಾರ್ಡ್‌ರೋಬ್ ಒಳಗಿನ ಪ್ರದೇಶದಲ್ಲಿ ಬಾಗಿಲು ತೆಗೆದಾಗ, ಸುಂದರವಾದ ಬೆಳಕು ಮೂಡಿಸಲು ಎಲ್‌ಇಡಿ ಸ್ಟ್ರಿಪ್ ಮೂಲಕ ಬೆಳಕಿನ ವ್ಯವಸ್ಥೆ ಆಗಿದೆ.

ವಾರ್ಡ್‌ರೋಬ್ ಬಾಗಿಲಿನ ಮೇಲೆ ಕನ್ನಡಿ ಅಳವಡಿಸಿಕೊಂಡಾಗ ನಮ್ಮ ಬಿಂಬವು ಸ್ಪಷ್ಟವಾಗಿ ಕಾಣುವಂತಾಗಲು ಬೆಳಕಿನ ವ್ಯವಸ್ಥೆ ಮಾಡಿಕೊಳ್ಳಲು ಸಾಧ್ಯವಿದೆ. ಇಲ್ಲಿ ನೀಡಲಾಗಿರುವ ವಿನ್ಯಾಸವು ಕೇವಲ ಒಂದು ಮಾದರಿ ಅಷ್ಟೆ. ಇದರ ಆಧಾರದಲ್ಲಿ ತಮ್ಮ ಮನೆಯ ಕೋಣೆಯ ಅಳತೆ, ಅನುಕೂಲಗಳಿಗೆ ತಕ್ಕಂತೆ, ವಾರ್ಡ್‌ರೋಬ್ ವಿನ್ಯಾಸಗೊಳಿಸಿಕೊಳ್ಳಬಹುದು. ■